Over 25 Years of Celebrating the Arts — India Foundation for the Arts — I F A

ಕಲಿ-ಕಲಿಸು — AN ARTS EDUCATION TEACHER INITIATIVE — KALI-KALISU

## ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್
## ಕರ್ನಾಟಕದ ಸರ್ಕಾರಿ ಶಾಲೆಗಳ ಕಲಾ ಶಿಕ್ಷಣ ಯೋಜನೆ ಅಡಿಯಲ್ಲಿ
## ಆಸಕ್ತಿಯುಳ್ಳ ಕಲಾವಿದರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ

**ಪ್ರಸ್ತಾವನೆಗಳನ್ನು ಸಲ್ಲಿಸಲು ಕಡೆಯ ದಿನಾಂಕ: 10th December, 2021**

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐಎಫ್‌ಎ) ಕರ್ನಾಟಕದ ಸರ್ಕಾರಿ ಶಾಲೆಗಳಲ್ಲ ಕಲಾ ಯೋಜನೆಗಳನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಕಲಾವಿದರುಗಳಿಂದ ಪ್ರಸ್ತಾವನೆಗಳನ್ನು ಕೋರುತ್ತಿದೆ. ಈ ಕಾರ್ಯಕ್ರಮವು ಸಂಸ್ಥೆಯ 'ಕಲಿ ಕಲಿಸು ' ಕಾರ್ಯಕ್ರಮದ ಒಂದು ಭಾಗವಾಗಿದೆ. ಇದರ ಧ್ಯೇಯೋದ್ದೇಶಗಳು, ಪಠ್ಯಕ್ರಮ ಮತ್ತು ತರಗತಿಯ ಭೋದನೆಗೆ ಕಲಾತ್ಮಕತೆಯ ಸ್ಪರ್ಶ ನೀಡುವುದು; ಕಲಾವಿದರು, ಶಿಕ್ಷಕರು ಹಾಗು ಶಾಲೆಯ ಸಮುದಾಯವು ಜೊತೆಯಾಗಿ ಕಾರ್ಯನಿರ್ವಹಿಸುವುದನ್ನು ಪ್ರೋತ್ಸಾಹಿಸುವುದು, ಶಾಲಾ ಪಠ್ಯಕ್ರಮಗಳಿಗೆ ಪೂರಕವಾಗಿ ಕಾರ್ಯಗೊಳ್ಳುವ ಯೋಜನೆಗಳು ಕಲಾ ಅಂತರ್ಗತ ಬೋಧನಾಕ್ರಮಗಳಿಗೆ ಭದ್ರವಾದ ಬುನಾದಿಯನ್ನು ನಿರ್ಮಿಸಿಕೊಡುವುದು.

ಕಳೆದ ವರ್ಷಗಳ ಯೋಜನೆಗಳ ಬಗ್ಗೆ ಮಾಹಿತಿ ಪಡೆಯಲು ಈ ಲಿಂಕ್ ಒತ್ತಿ:
https://sites.google.com/site/kalikalisu/project/phase-4---2012

### ಈ ಯೋಜನಾ ಪ್ರಸ್ತಾವನೆಗಳನ್ನು ಯಾರು ಸಲ್ಲಿಸಬಹುದು

- ಕಲಾ ಶಿಕ್ಷಣದಲ್ಲಿ ಪೂರ್ವಾನುಭವ ಇರುವ / ಇಲ್ಲದ ಕಲಾವಿದರು ಅಥವಾ ಕಲಾಶಿಕ್ಷಣದಲ್ಲಿ ಸೂಕ್ತವಾದ ತರಬೇತಿ ಪಡೆದವರು / ಪಡೆಯದವರು ಪ್ರಸ್ತಾವನೆಗಳನ್ನು ಸಲ್ಲಿಸಬಹುದು. ಆದಾಗ್ಯೂ, ಸರ್ಕಾರಿ ಶಾಲಾ ಶಿಕ್ಷಣ ವ್ಯವಸ್ಥೆಯ ಪೂರ್ವಾನುಭವ ಇಲ್ಲದಿರುವ ಕಲಾವಿದರು ಮಕ್ಕಳೊಂದಿಗೆ ಕಾರ್ಯನಿರ್ವಹಿಸಿದ ಅನುಭವವನ್ನಾದರೂ ಹೊಂದಿರಬೇಕು.
- ಸ್ಥಳೀಯ ಭಾಷೆಯನ್ನು ಬಲ್ಲವರಾಗಿರಬೇಕು.
- ಭಾರತೀಯ ಪ್ರಜೆಗಳಾಗಿರಬೇಕು

## ಯೋಜನೆಯ ವ್ಯಾಪ್ತಿ

ಕಾರ್ಯಗತಗೊಳಿಸುವ ಯೋಜನೆಯಲ್ಲಿ ಕೆಳಕಂಡ ಯಾವುದಾದರೊಂದು ಅಂಶವಿರಬೇಕು.

- ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರು, ಶಾಲಾ ಆಡಳಿತ ಮಂಡಳಿ, ಕಲಾ ಅಭ್ಯಾಸಿಗಳು ಮುಂತಾದ ಹಲವು ಪಾಲುದಾರರನ್ನು ಕಲಾ ಯೋಜನೆಯ ಪರಿಧಿಯಲ್ಲಿ ತರಬೇಕು.
- ಭೋದನೆಯಲ್ಲಿ ಸ್ಥಳೀಯ ಹಾಗೂ ಪ್ರಾಂತೀಯ ಕಲಾ ಪ್ರಕಾರಗಳನ್ನು ಬಳಸಿಕೊಳ್ಳುವ ಮೂಲಕ
- ಕಲಿಕ ಪರಿಸರವನ್ನು ಶ್ರೀಮಂತಗೊಳಿಸುವುದು.
- ವಿಧ್ಯಾರ್ಥಿಕೇಂದ್ರಿತ ಕಲಿಕೆಗೆ ಪ್ರೋತ್ಸಾಹಿಸುವುದು. ಉದಾಹರಣೆಗೆ ವಿದ್ಯಾರ್ಥಿಗಳ ಕಲಾ ಸಂಘಗಳ ಮೂಲಕ ಕಲಾ ಪ್ರಕಾರಗಳನ್ನು ಅಭ್ಯಸಿಸುವುದು. (ರಂಗಭೂಮಿ , ದೃಶ್ಯ ಕಲೆ, ಸಿನಿಮಾ, ಸಾಹಿತ್ಯ, ಛಾಯಾಚಿತ್ರ, ಸಂಗೀತ ಇತ್ಯಾದಿ)
- ಯೋಜನೆಯು ಕಲಾ ಕಲಿಕೆಯ ಮೂಲಕ ಸಾಮಾಜಿಕ ನ್ಯಾಯ ಮತ್ತು ಪರಿಸರ ಸಂಬಂಧಿ ಅರಿವು ಮೂಡಿಸಲು ಶಾಲಾ ಸಮುದಾಯವನ್ನು ಪ್ರೇರೇಪಿಸುವಲ್ಲಿ ಸಹಕಾರಿಯಾಗಬೇಕು.
- ಕರೋನ ಸಾಂಕ್ರಾಮಿಕದ ಮುಂದಿನ ದಿನಗಳಲ್ಲಿ, ಕಲಾ ಅಂತರ್ಗತ ಕಲಿಕೆಯ ನಿರಂತರ ಸಾಧ್ಯತೆಗಳನ್ನು ಶಾಲೆಯಲ್ಲಿ ಪ್ರತಿಪಾದಿಸುವುದು.

ಇನ್ನಿತರ ಅಲ್ಪಾವಧಿ ಅಥವಾ ದೀರ್ಘಾವಧಿಯ ನೂತನ ಮತ್ತು ಸೃಜನಶೀಲ ಕಲಾ ಶಿಕ್ಷಣ ಯೋಜನೆಗಳನ್ನು ಸಹ ಪರಿಗಣಿಸಲಾಗುವುದು.

## ಯೋಜನಾ ಪ್ರಸ್ತಾವನೆ ಸಲ್ಲಿಸುವ ವಿಧಾನ:

- ಯೋಜನೆಗೆ ಸಂಭಂದಪಟ್ಟ ಪ್ರಶ್ನೆಗಳಿದ್ದಲ್ಲಿ, ನಿಮ್ಮ ಹೊಳಹುಗಳ ಬಗ್ಗೆ ಚರ್ಚಿಸಬಯಸಿದಲ್ಲಿ ಅಥವಾ ನಿಮ್ಮ ಕರಡು ಪ್ರಸ್ತಾವನೆಯನ್ನು ನಮಗೆ ಕಳುಹಿಸ ಬಯಸಿದಲ್ಲಿ, **15th November 2021**ರ ಒಳಗೆ ನಮ್ಮನ್ನು ಸಂಪರ್ಕಿಸಿ.
- ನಿಮ್ಮ ಅಂತಿಮ ಪ್ರಸ್ತಾವನೆಯು ಇಮೇಲ್ ಮೂಲಕ **10th December, 2021**ರ ಒಳಗೆ ನಮಗೆ ಸೇರಬೇಕು.
- ಯೋಜನೆಯ ನಿರೀಕ್ಷಿತ ಕಾಲಾವಧಿ ಕನಿಷ್ಠ ಆರು ತಿಂಗಳದ್ದಾಗಿರಬೇಕು ಹಾಗೂ ಗರಿಷ್ಟ ೧೮ ತಿಂಗಳ ಅವಧಿಯದ್ದಾಗಿರಬೇಕು.
- ನಿಮ್ಮ ಯೋಜನೆಯನ್ನು ಕನ್ನಡ, ಉರ್ದು, ಹಿಂದಿ, ಮರಾಠಿ, ತೆಲುಗು ಹಾಗು ಇಂಗ್ಲಿಷ್ ಭಾಷೆಯಲ್ಲಿ ಬರೆಯಬಹುದು.
- ನಿಮ್ಮ ಪ್ರಸ್ತಾವನೆ ಆಯ್ಕೆಯಾದಲ್ಲಿ ನಿಗಧಿಪಡಿಸಿದ ದಿನಾಂಕದಂದು ಆನ್ಲೈನ್ ಮೂಲಕ ನಡೆಯುವ ಚರ್ಚೆಗೆ ತಾವು ಲಭ್ಯವಿರಬೇಕು. (ದಿನಾಂಕವನ್ನು ತಿಳಿಸಲಾಗುವುದು)
- **31st January 2022** ಕ್ಕೆ ಆಯ್ಕೆಯಾದ ಯೋಜನೆಗಳ ಪಟ್ಟಿಯನ್ನು ನಿರೀಕ್ಷಿಸಬಹುದು.

ನಿಮ್ಮ ಅಂತಿಮ ಯೋಜನೆಯು ಈ ಕೆಳಕಂಡ ವಿವರಗಳನ್ನು ಒಳಗೊಂಡಿರಬೇಕು.

1. ಯೋಜನೆಯ ಉದ್ದೇಶಗಳು.
2. ಆಯ್ಕೆಮಾಡಿಕೊಂಡ ಸರ್ಕಾರೀ ಶಾಲೆಯ ಸಂಪೂರ್ಣ ವಿವರ.
3. ಕಾರ್ಯ ಯೋಜನೆಗಳ ವಿವರ.
4. ಯೋಜನೆಯಿಂದ ಬರಬಹುದಾದ ಅಪೇಕ್ಷಿತ ಫಲಿತಾಂಶಗಳು.
5. ಆಯ್ಕೆ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರ ಒಪ್ಪಿಗೆ ಪತ್ರ.
6. ಖರ್ಚು- ವೆಚ್ಚಗಳ ವಿವರ.

**ಬಜೆಟ್**

- ಗರಿಷ್ಠ ರೂ. 2,00,000/- ವರೆಗೆ.
- ಅರ್ಜಿದಾರರು ಸಂಪೂರ್ಣ ಬಜೆಟ್‌ಅಲ್ಲಿ ಗರಿಷ್ಠ ೪೦% ಅಷ್ಟು ಗೌರವಧನವನ್ನು ಪರಿಗಣಿಸಬಹುದು. ಖರ್ಚು-ವೆಚ್ಚದ ಲೆಕ್ಕದಲ್ಲಿ ಗೌರವಾಧನವು ಸೇರಿರುತ್ತದೆ ಎಂಬುದನ್ನು ಗಮನಿಸಿ.

**ಯೋಜನೆಯ ಸಲ್ಲಿಕೆ:**

ನಿಮ್ಮ ಅಂತಿಮ ಪ್ರಸ್ತಾವನೆಯು ೨ಎಂ.ಬಿಯ ಒಳಗಿದ್ದು, ಇಮೇಲ್ ಮೂಲಕ ಶ್ರೀ ಕೃಷ್ಣಮೂರ್ತಿ ಟಿ ಏನ್, ಹಿರಿಯ ಕಾರ್ಯಕ್ರಮ ಅಧಿಕಾರಿಗಳು, ಕಲಾ ಶಿಕ್ಷಣ ಇವರಿಗೆ krishna@indiaifa.org ಕಳುಹಿಸಿಕೊಡಿ. ನಿಮ್ಮ ಇಮೇಲ್ ವಿಷಯ ಇಂತಿರಲಿ: 'ಕಲಾ ಶಿಕ್ಷಣದಡಿ ಯೋಜನೆಯ ಪ್ರಸ್ತಾವನೆ (ಕಲಾವಿದರು)'

ದೂರವಾಣಿ ಸಂಖ್ಯೆ : 8762954080 (ದಯವಿಟ್ಟು ಸೋಮವಾರದಿಂದ ಶುಕ್ರವಾರದ ಒಳಗೆ ಬೆಳಗ್ಗೆ ೧೦ ರಿಂದ ಸಂಜೆ ೪ರ ಒಳಗೆ ಕರೆ ಮಾಡಿ)

For more information on Kali-Kalisu follow this link:

http://www.indiaifa.org/programmes/arts-education.html